ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	671 (633)
ಉತ್ತರಿಸುವ ದಿನಾಂಕ	11–03–2020
ಮಾನ್ಯ ಸದಸ್ಯರ ಹೆಸರು	ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಪ್ರೆಸ್ಟೀಜ್ ಟೆಕ್ ಪಾರ್ಕ್ 3 ಎಂಬ ಹೆಸರಿನಲ್ಲಿ 2014–15 ರಲ್ಲಿ ವರ್ತೂರು ಹೋಬಳಿಯ ಬೆಳ್ಳಂದೂರು ಖಾನೆ ಗ್ರಾಮದ ಸರ್ವೇ ಸಂಖ್ಯೆಗಳಾದ 110/1, 110/2, 110/3 ರಲ್ಲಿ ನಿರ್ಮಿಸಿದ ವಾಣಿಜ್ಯ ಸಂಕೀರ್ಣದ ವಾಣಿಜ್ಯ ಬ್ಲಾಕುಗಳನ್ನು 135 ವಿವಿಧ ಗ್ರಾಹಕರುಗಳಿಗೆ ಸರ್ಕಾರವು ನಿಗದಿಪಡಿಸಿದ ಮಾರ್ಗಸೂಚಿ ದರಕ್ಕಿಂತ ಕಡಿಮೆ ದರದಲ್ಲಿ ಮಾರಾಟ ನೋಂದಣಿ ಮಾಡಿರುವ ತಪ್ಪಿತಸ್ಥ ಅಧಿಕಾರಿಯ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; ಉದ್ದೇಶಪೂರ್ವಕವಾಗಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವ ಅಧಿಕಾರಿಯನ್ನು ಅಮಾನತ್ತುಗೊಳಿಸದಿರಲು ಕಾರಣವೇನು;	ಸದರಿ ನೋಂದಾಯಿಸಿರುವ ಅಧಿಕಾರಿಗಳಾದ ಶ್ರೀ ಆರ್.ಮಹದೇವ, ಹಿಂದಿನ ಉಪ ನೋಂದಣಾಧಿಕಾರಿ, ಶಿವಾಜಿನಗರ ಹಾಲಿ ಉಪ ನೋಂದಣಾಧಿಕಾರಿ, ಉಪ ನೋಂದಣಿ ಕಛೇರಿ, ಮಹದೇವಪುರ ಮತ್ತು ಶ್ರೀಮತಿ ರಾಜೇಶ್ವರಿ ಹೆಗ್ಡೆ, ಹಿಂದಿನ ಪ್ರಭಾರ ಉಪ ನೋಂದಣಾಧಿಕಾರಿ, ಉಪ ನೋಂದಣಿ ಕಛೇರಿ, ಶಿವಾಜಿನಗರ ಹಾಲಿ ಉಪ ನೋಂದಣಾಧಿಕಾರಿ, ಉಪ ನೋಂದಣಿ ಕಛೇರಿ, ಶಿರಸಿ ಇವರುಗಳ ವಿರುದ್ಧ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 13ರಡಿ ಜಂಟಿ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನು ನೇಮಿಸಲಾಗಿದೆ. ಇಲಾಖಾ ವಿಚಾರಣೆಯ ಅಂತಿಮ ವರದಿ ಬಂದ ನಂತರ, ವರದಿಯನ್ನು ಆಧರಿಸಿ, ತಪ್ಪಿತಸ್ಥ ಅಧಿಕಾರಿಯ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.
ಆ	ದುರುದ್ದೇಶ ಪೂರ್ವಕವಾಗಿ ಪ್ಲಾನ್ ಮಾಡಿ ರೂ.103.5 ಕೋಟಿ ನಷ್ಟ ಉಂಟು ಮಾಡಿರುವ ಅಧಿಕಾರಿಯಿಂದಲೇ ಸದರಿ ಮೊತ್ತವನ್ನು ವಸೂಲು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ಸಂಬಂಧಪಟ್ಟ ಅಧಿಕಾರಿಗಳಿಗೆ ಕರ್ನಾಟಕ ನೋಂದಣಿ ನಿಯಮಗಳು 1965ರ ನಿಯಮ 170ರಡಿ ದಿನಾಂಕ: 07–12–2018 ರಂದು ಕಾರಣ ಕೇಳುವ ನೋಟಿಸ್ ಜಾರಿ ಮಾಡಿ ಅವರಿಂದಲೇ ಏಕೆ ವಸೂಲಾಯಿಸಬಾರದು ಎಂಬುದಕ್ಕೆ ಸಕಾರಣ ನೀಡಲು ಸೂಚಿಸಲಾಗಿದೆ.
ಇ	2014–15ರಲ್ಲಿ ವರ್ತೂರು ಹೋಬಳಿಯ ಬೆಳ್ಳಂದೂರು ಖಾನೆ ಗ್ರಾಮದ ಸರ್ವೇ ಸಂಖ್ಯೆಗಳಾದ 110/1, 110/2, 110/3 ರಲ್ಲಿ ನಿರ್ಮಿಸಿದ ವಾಣಿಜ್ಯ ಸಂಕೀರ್ಣದ ವಾಣಿಜ್ಯ ಬ್ಲಾಕುಗಳನ್ನು 135 ವಿವಿಧ ಗ್ರಾಹಕರುಗಳಿಗೆ ಸರ್ಕಾರವು ನಿಗದಿಪಡಿಸಿದ ಮಾರ್ಗಸೂಚಿ ದರಕ್ಕಿಂತ ಕಡಿಮೆ ದರದಲ್ಲಿ ಮಾರಾಟ ನೋಂದಣಿ ಮಾಡಿರುವುದು ಸಾಬೀತಾಗಿರುವುದ ರಿಂದ ಈ ನೋಂದಣಿಯನ್ನು ರದ್ದುಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ಈಗಾಗಲೇ ನೋಂದಾಯಿಸಿರುವ ದಸ್ತಾವೇಜನ್ನು ಏಕಪಕ್ಷೀಯವಾಗಿ ರದ್ದುಪಡಿಸುವ ಅಧಿಕಾರ ಇಲಾಖೆಗೆ ಇರುವುದಿಲ್ಲ. ಸಂಬಂಧಪಟ್ಟ ದಸ್ತಾವೇಜಿನ ಉಭಯ ಪಕ್ಷಕಾರರು ಒಪ್ಪಿ ರದ್ದತಿ ಪತ್ರಗಳನ್ನು ಸಹಿ ಮಾಡಿ ಹಾಜರುಪಡಿಸಿದ್ದಲ್ಲಿ ಉಪ ನೋಂದಣಾಧಿಕಾರಿಗಳು ನಿಯಮಾನುಸಾರ ಅಂತಹ ರದ್ದತಿ ಪತ್ರಗಳನ್ನು ನೋಂದಾಯಿಸುತ್ತಾರೆ. ಇಲ್ಲವಾದಲ್ಲಿ ಸಂಬಂಧಪಟ್ಟ ಮಾನ್ಯ ನ್ಯಾಯಾಲಯಗಳಲ್ಲಿ ನೋಂದಣಿಯಾದ ದಸ್ತಾವೇಜುಗಳನ್ನು ರದ್ದುಪಡಿಸಲು ದಾವೆ ದಾಖಲಿಸಬಹುದಾಗಿರುತ್ತದೆ.

ಕ್ರ. ಸಂ.	ಪ್ರಶ್ನೆ	ಉತ್ತರ
ಈ	ಸಂಬಂಧಿತ ಕಂಪನಿಯವರು ಕೊರತೆ ಶುಲ್ಕವನ್ನು ಪಾವತಿಸಲು ಹೊರಡಿಸಿರುವ ಆದೇಶದ ವಿರುದ್ಧ ಮಾತ್ರವೇ ಅಪೀಲು ಮಾಡಿ ತಡೆಯಾಜ್ಞೆ ಪಡೆದುಕೊಂಡಿರುವುದರಿಂದ ಈ ಅಪೀಲು ಇತ್ಯರ್ಥವಾಗುವವರೆಗೆ ಮಾರಾಟ ನೋಂದಣಿಯನ್ನು ಅಮಾನತ್ತಿನಲ್ಲಿಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಮತ್ತು ಸದರಿ ಕಟ್ಟಡಗಳಿಗೆ ನೀರಿನ ಸಂಪರ್ಕ ಮತ್ತು ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಕ್ರಮ ಕೈಗೊಳ್ಳಲಾಗಿದೆಯೇ?	ಈಗಾಗಲೇ ನೋಂದಣಿಯಾಗಿರುವ ದಸ್ತಾವೇಜುಗಳನ್ನು ಅಮಾನತ್ತಿನಲ್ಲಿಡಲು ನೋಂದಣಿ ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ ಆದ್ದರಿಂದ ಮಾನ್ಯ ನ್ಯಾಯಾಲಯದ ಅಂತಿಮ ಆದೇಶ ಬಂದ ನಂತರ ಸೂಕ್ತ ಕ್ರಮ ಜರುಗಿಸಲಾಗುವುದು.

ಸಂಖ್ಯೆ: ಕಂಇ/41/ಎಂಎನ್‌ಎಸ್‌ಎ/2020

(ಆರ್.ಅಶೋಕ)
ಕಂದಾಯ ಸಚಿವರು